

ಹೆಂಡತಿ: ರೀ ಮಾವಿನ ಕಾಯಿಯ ಉಪ್ಪಿನಕಾಯಿ ಮುಗಿದು ಹೋಗಿದೆ. ಅದಕ್ಕೆ ಮಿಡಿ ಹಾಕಿ ತಯಾರಿಸಲಾ?

ಗಂಡ: ಅಯ್ಯೋ ದೇವರೇ ಅದಕ್ಕೆ ಮಿಡಿ ಯಾಕೆ ಬೇಕು? ಸೀರೆ ಉಟ್ಕೊಂಡೇ ಮಾಡು ಪರವಾಗಿಲ್ಲ!

★★★

ಹೆಂಡತಿ: ರೀ ಯಾಕ್ರೀ ನಿಮ್ಮ ಕಣ್ಣಲ್ಲಿ ನೀರು?

ಗುಂಡ: ಇಪ್ಪತ್ತು ವರ್ಷದ ಹಿಂದೆ ನಾನು ನಿನ್ನನ್ನು ಪ್ರೀತಿಸುತ್ತಿದ್ದೆ. ಆಗ ನಿನ್ನ ತಂದೆ ನನ್ನನ್ನು ಜೈಲಿಗೆ ಕಳಿಸುತ್ತೇನೆಂದು ಹೇಳಿದ್ದರು. ನೆನಪಿದೆಯಾ?

ಹೆಂಡತಿ: ಹೂಂ ನೆನಪಿದೆ. ಅದಕ್ಕೆ ಈಗ ಯಾಕೆ ಅಳ್ತಾ ಇದೀರಾ?

ಗುಂಡ: ಜೈಲಿಗೆ ಹೋಗದೆ ನಿನ್ನನ್ನು ಮದುವೆಯಾದೆನಲ್ಲಾಂತ.

★★★



**ಹೆಚ್ಚಿನ ಮೈಲೇಜು....**

ಒಬ್ಬಾತ ತಾನು ಕೊಂಡ ಬೈಕು ಸರಿಯಾದ ಮೈಲೇಜು ಕೊಡುತ್ತಿಲ್ಲ ಎಂದು ಡೀಲರ್ ಬಳಿ ಗಲಾಟೆ ಮಾಡುತ್ತಿದ್ದ. 'ನೀವು ಎಂಬತ್ತು ಕಿಲೋಮೀಟರ್ ಕೊಡುತ್ತೆ ಅಂತ ಪ್ರಚಾರ ಮಾಡ್ತಿದೀರಾ, ಇದು ನೋಡಿದ್ರೆ ಎಪ್ಪತ್ತೇ ಕೊಡ್ತಿದೆ'.

ಅಲ್ಲೇ ಕುಳಿತಿದ್ದ ಶಿಂಗ್ರೀಕ ಹೇಳ್ದ 'ಹತ್ತು ಕಿಲೋಮೀಟರ್ ನೂಕ್ಕೊಂಡು ಹೋಗ್ರಿ, ಆಗ ಎಂಬತ್ತೇ ಆಗುತ್ತೆ!'

**-ಕೆ.ಪಿ. ಸತ್ಯನಾರಾಯಣ, ಹಾಸನ**

ಕಂಪೆನಿ ಮಾಲೀಕ: ಸಾರ್ ನಿಮ್ಮ ಚಿತ್ರ ಬಿಡುಗಡೆಯಾದಾಗ ನಮ್ಮ ಕಂಪೆನಿಗೆ ಸಿಕ್ಕಾಪಟ್ಟೆ ಲಾಭ ಆಯಿತು.

ನಿರ್ಮಾಪಕ: ಹೌದಾ ವೆರಿಗುಡ್! ಅಂದ ಹಾಗೆ ನಿಮ್ಮ ಕಂಪೆನಿಯಲ್ಲಿ ಏನು ತಯಾರಿಸುತ್ತಿದ್ದೀರಿ?

ಕಂಪೆನಿ ಮಾಲೀಕ: ತಲೆನೋವಿನ ಮುಲಾಮು

★★★

ಕಳ್ಳ: ಮಹಾಸ್ವಾಮಿ, ನೀವು ನನಗೆ ಕೊಟ್ಟಿರುವ ಶಿಕ್ಷೆಯನ್ನು ನನ್ನ ವಕೀಲರಿಗೂ ಕೊಡಬೇಕು!

ನ್ಯಾಯಾಧೀಶ: ಯಾಕೆ?

ಕಳ್ಳ: ಯಾಕೆಂದರೆ ನಾನು ಕದ್ದಿರುವ ಹಣವನ್ನೆಲ್ಲಾ ಅವರಿಗೆ ಕೊಟ್ಟಿದೀನಿ ಫೀಸೂಂತ!

★★★

ಗುಂಡ: ನನ್ನ ಮಗಳನ್ನು ಕಿಡ್ನಾಪ್ ಮಾಡಿದ್ದು ಅಲ್ಲದೆ ಮದುವೆ ಆಮಂತ್ರಣ ಪತ್ರಿಕೆ ಕಳುಹಿಸಿದ್ದಾನೆ ಅಯೋಗ್ಯ.

ಗೆಳೆಯ: ಅರೆ ಹೌದಾ? ಅದಕ್ಕೆ ನೀನೇನು ಮಾಡಿದೆ?

ಗುಂಡ: ಬಿಡ್ತೀನಾ? ಹೋಗಿ ಊಟ ಮಾಡಿಕೊಂಡು ಬಂದೆ!

★★★

ನಾಣಿ: ಗುಂಡ, ನಮ್ಮ ಕಾನೂನು ಎರಡನೇ ಮದುವೆಗೆ ಯಾಕೆ ಅನುಮತಿ ಕೊಟ್ಟಿಲ್ಲ?

ಗುಂಡ: ಮೊದಲು ನೀನು ಮದುವೆಯಾಗು! ನಂತರ ನಿನಗೆ ಕಾನೂನು ನಿನ್ನ ಕಡೆನೆ ಇದೆ ಎನ್ನುವುದು ಅರ್ಥವಾಗುತ್ತದೆ!

**(ಸಂಗ್ರಹ): ಎಂ. ಕೆ. ಮಂಜುನಾಥ್,**
**ಬೆಂಗಳೂರು**




# ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
## ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು

9611002265

ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ, ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೇದನ ಮುಂತಾದ

ಇನ್ನೂ ಅತೀ ಜಟಿಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.

ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.

ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.

ಆಫೀಸ: ಧಮ್ಮಣಗಿ ಪ್ರೆಸ್ಟೀಜ್ ಪ್ಲಾಜಾ
ಎಫ್ 13,
ಹೊಟೇಲ ಆಯೋಧ್ಯ ಪಕ್ಕದಲ್ಲಿ,
ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.

ಮನೆ: ಶ್ರೀ ಶ್ರೀನಿವಾಸ ಅನುಗ್ರಹ
ಪಿ.ಎನ್.ಟಿ. ಕಾಲನಿ, ಹೇಮಂತನಗರ,
ಕೇಶ್ವಾಪುರ, ಹುಬ್ಬಳ್ಳಿ-23.

0836-2282265
E-mail: mbjoshiastro@gmail.com